ಆ) ಇದಕ್ಕೆ ತಗಲುವ ಅಂದಾಜು ಮೊತ್ತ ರೂ 76 00 ಕೋಟಿ ಬಂಡವಾಳದ ಮೂಲಗಳು ಕೆಳಕಂಡಂತಿದೆ

1) ಹುಡ್ಕೋದಿಂದ	ರೂ 57 00 ಕೋಟಿ
2) ಡಿಬೆಂಚರುಗಳ ಮೂಲಕ	ರೂ 15 00 ಕೋಟಿ
3) ಕರ್ನಾಟಕ ಸರ್ಕಾರದಿಂದ	ರೂ 04 00 ಕೋಟಿ

ಇ) ಈ ಘಟಕದ ಸ್ಥಾಪನೆಯ ಕಾಮಗಾರಿ ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಮಟ್ಟಿನ ವಿಳಂಬ ಉಂಟಗಿತ್ತು ಮತ್ತು ನಿಗದಿತ ಗುರಿಯಂತೆ ಅನುಷ್ಠಾನಗೊಳಿಸುವಲ್ಲಿ ಸ್ವಲ್ಪ ಹಿಂದೆ ಬಿದ್ದಿತ್ತು ಪ್ರಸ್ತುತ ಶೇ 90ರಷ್ಟು ಸಾಮಗ್ರಿಗಳು ತಲುಪಿರುತ್ತದೆ ಶೇ 60 ರಷ್ಟು ನಿರ್ಮಾಣ ಕಾರ್ಯಗಳು ಮುಗಿದಿರುತ್ತದೆ ಇನ್ನು ಕೆಲವು ತಿಂಗಳುಗಳಲ್ಲಿ ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ನಿರೀಕ್ಷೆಯಲ್ಲಿರುತ್ತದೆ

ಈ) ಈ ಘಟಕವು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಿದಲ್ಲಿ ರೂ 35 00 ಕೋಟಿಗಳ ಆದಾಯ ನಿರೀಕ್ಷಿಸಬಹುದು

ಕಾರವಾರ ಬಂದರು ಅಭಿವೃದ್ಧಿ ಹಾಗೂ ವ್ಯವಹಾರ

215 (285) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾರವಾರ ಬಂದರಿನಿಂದ ಹಾಲಿ ಯಾವ ಯಾವ ಉತ್ಪನ್ನಗಳು ಆಮದಾಗುತ್ತಿವೆ

ಆ) ಕಾರವಾರ ಬಂದರನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ರಾಜ್ಯ ಸರ್ಕಾರಕ್ಕೆ ಕಾರವಾರ ಬಂದರಿನಿಂದ ಬರುತ್ತಿರುವ ಆದಾಯ ಎಷ್ಟು?

ಶ್ರೀ ವಸಂತ ಏ ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ) ಕಾರವಾರ ಬಂದರಿನಿಂದ ಹಾಲಿ ಕೈಗಾರಿಕಾ ಉಪ್ಪು, ರಾಕ್ ಫೋಸ್‌ಫೇಟ್, ಕಚ್ಚಾ ಸಕ್ಕರೆ, ಫರ್ನೀಸ್ ಆಯಲ್, ಪಾಮ್ ಆಯಿಲ್, ಬಿಟುಮನ್, ಕೆರೋಸಿನ್ ಮುಂತಾದ ಸರಕುಗಳು ಆಮದಾಗುತ್ತದೆ ಹಾಗೂ ಗ್ರಾನೈಟ್ ಅಲುಮಿನಿಯಂ ಜೋಳ, ಸಕ್ಕರೆ, ಮೊಲಾಸಿಸ್, ಫೋಸ್‌ಫರಿಕ್ ಆಸಿಡ್, ಕಬ್ಬಿಣದ ಅದಿರು ಮುಂತಾದ ಸರಕುಗಳು ರಫ್ತಾಗುತ್ತವೆ

ಆ) ಕಾರವಾರ ಬಂದರಿನ ಎರಡನೆ ಹಂತದ ಅಭಿವೃದ್ಧಿ ಬಗ್ಗೆ ಮೆ ಟೆಕ್‌ಸೋಕ್ ಇವರು ಯೋಜನಾ ವರದಿಯನ್ನು ನೀಡಿದ್ದು ರೂ 200 ಕೋಟಿ ಅಂದಾಜು ವೆಚ್ಚದಲ್ಲಿ ಎರಡನೆಯ ಹಂತದ ಅಭಿವೃದ್ಧಿಯನ್ನು ಖಾಸಗಿ ಸಹಭಾಗಿತ್ವದಡಿಯಲ್ಲಿ ಅಥವಾ ಕೇಂದ್ರ ಸರ್ಕಾರದ ನೆರವಿನೊಂದಿಗೆ ಕೈಗೊಳ್ಳಲು ಉದ್ದೇಶಿಸಿದ್ದು, ಸದ್ರಿ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ಇ) ಕಾರವಾರ ಬಂದರಿನ ನೌಕಾ ಚಟುವಟಿಕೆಗಳಿಂದಾಗಿ 2002–03ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರೂ 5 82,68481/– ನೇರ ಆದಾಯವನ್ನು ಗಳಿಸಿರುತ್ತದೆ

ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿ

216 (288) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?